# ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

ನಂ.ಕ.ರ.ಅ.ನಿ.ನಿ/ವ್ಯ.ನಿ/2010-11 2133 11-01-2011

ಗೆ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಲೋ.ಬಂ ಮತ್ತು ಒ.ಜ.ಸಾ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

12/01/2011

ಮಾನ್ಯರೆ,

ವಿಷಯ : ದಕ್ಷಿಣ ಕನ್ನಡ ಜಿಲ್ಲೆ, ಸುಳ್ಯ ತಾಲ್ಲೂಕು, ಸುಬ್ರಹ್ಮಣ್ಯ-ಉಡುಪಿ ರಸ್ತೆ ಕಿ.ಮೀ 1.80 ರಲ್ಲಿ ಕುಮಾರಧಾರ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸದರಿ ಸೇತುವೆ ನಿರ್ಮಾಣ ಕಾಮಗಾರಿಯು ಸರ್ಕಾರದ ಆದೇಶ ಸಂಖ್ಯೆ : ಲೋಇ 37 ಇಎಪಿ 2006, ಬೆಂಗಳೂರು ದಿನಾಂಕ 26-04-2007ರಲ್ಲಿ 4ನೇ ಹಂತದ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಸೇತುವೆ ನಿರ್ಮಾಣ ಯೋಜನೆಯಡಿಯಲ್ಲಿ ರೂ.800.00 ಲಕ್ಷಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯಾಗಿರುತ್ತದೆ. ಈ ಕಾಮಗಾರಿಯ ಯೋಜನಾ ವರದಿಯನ್ನು ತಯಾರಿಸುವ ಕಾರ್ಯವನ್ನು ಸಮಾಲೋಚಕರಾದ M/s.Design Heights, ತುಮಕೂರುರವರಿಗೆ ವಹಿಸಿಕೊಡಲಾಗಿತ್ತು. ಈ ಹಿಂದೆ ದಿನಾಂಕ 29-10-2009ರಂದು ಜರುಗಿದ ನಿಗಮದ 77ನೇ ಮಂಡಳ ಸಭೆಯಲ್ಲಿ ಅನುದಾನದ ಕೊರತೆಯಿಂದ 2009-10ನೇ ಸಾಲಿನಲ್ಲಿ ಯಾವುದೇ ಹೊಸ ಪ್ರಸ್ತಾವನೆಗಳನ್ನು ಕೈಗೊಳ್ಳಬಾರದೆಂದು ತೀರ್ಮಾನಿಸಲಾಗಿರುತ್ತದೆ. ಪ್ರಸ್ತುತ ಸಮಾಲೋಚಕರು ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಡಿಸೆಂಬರ್ 2010ರಲ್ಲಿ ಸಲ್ಲಿಸಿರುತ್ತಾರೆ. ಅದರಂತೆ ಸದರಿ ಸೇತುವೆ ನಿರ್ಮಾಣಕ್ಕೆ ರೂ.600.00 ಲಕ್ಷಗಳ ವೆಚ್ಚ ತಗಲುತ್ತದೆಂದು ಅಂದಾಜಿಸಲಾಗಿದೆ.

ಮುಂದುವರೆದು, ಉದ್ದೇಶಿತ ಸೇತುವೆಯು ಪ್ರಸಿದ್ಧ ಯಾತ್ರಸ್ಥಳವಾದ ಶ್ರೀ ಕುಕ್ಕೆ ಸುಬ್ರಹ್ಮಣ್ಯಕ್ಕೆ ಸಂಪರ್ಕ ಕಲ್ಪಿಸುವ ಸೇತುವೆಯಾಗಿರುತ್ತದೆ. ಈಗಿರುವ ಹಾಲಿ ಸೇತುವೆಯು ಕೆಳಮಟ್ಟದ ಸೇತುವೆಯಾಗಿದ್ದು ಮಳೆಗಾಲದಲ್ಲಿ ಈ ಸೇತುವೆಯು ಸಂಪೂರ್ಣ ಮುಳುಗಡೆಯಾಗುವುದರಿಂದ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ರಸ್ತೆ ಸಂಪರ್ಕ ಕಡಿದು ಹೋಗುತ್ತದೆ ಮತ್ತು ದೇವಸ್ಥಾನಕ್ಕೆ ಹೋಗುವ ಭಕ್ತರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಹಾಲಿ ಸೇತುವೆಯ ಪಕ್ಕದಲ್ಲಿ ಎತ್ತರ ಮಟ್ಟದ ಸೇತುವೆಯನ್ನು ನಿರ್ಮಾಣ ಮಾಡಬೇಕಾಗಿರುತ್ತದೆ. ದಿನಾಂಕ 17-06-2010ರಂದು ಜರುಗಿದ ನಿಗಮದ 79ನೇ ಮಂಡಳ ಸಭೆಯಲ್ಲಿ ಸದರಿ ಸೇತುವೆಯನ್ನು ನಿಗಮದ ವತಿಯಿಂದ ಕೈಗೊಳ್ಳಲು ಅನುಮೋದನೆ ದೊರಕಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಸೇತುವೆ ನಿರ್ಮಾಣ ಯೋಜನಾ ವರದಿಗೆ ಪರಿಷ್ಕೃತ ಆಡಳಿತಾತ್ಮಕ ಮಂಜೂರಾತಿ ಮತ್ತು ಸೇತುವೆ ನಿರ್ಮಾಣಕ್ಕಾಗಿ ಪ್ರತ್ಯೇಕ ಹೆಚ್ಚುವರಿ ಅನುದಾನ ರೂ.600.00 ಲಕ್ಷಗಳನ್ನು ಈ ಸಾಲಿನಲ್ಲಿ ಒದಗಿಸುವಂತೆ ಈ ಮೂಲಕ ಕೋರಲಾಗಿದೆ. ಕಾಮಗಾರಿಯ ಯೋಜನಾ ವರದಿಯನ್ನು ಈ ಪತ್ರದೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ಸಹಿ)
ವ್ಯವಸ್ಥಾಪಕ ನಿರ್ದೇಶಕರು

2073
07/02/11

D:\New folder\laxmipathi k\kannada.doc